ವಿಷಯ :- ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕುಡಿಯುವ ನೀರಿ ಅಭಾವ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 849 (1545)

ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಮಳೆ ಇಲ್ಲದೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಉಂಟಾಗಿರುವ ಕುಡಿಯುವ ನೀರಿನ ಕೊರತೆ ನೀಗಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಈ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

(ಆ) ಬಿಡುಗಡೆಯಾದ ಹಣದಲ್ಲಿ ಈಗ ಎಷ್ಟು ಖರ್ಚಾಗಿದೆ, ಉಳಿದ ಹಣವನ್ನು ಯಾವಾಗ ಖರ್ಚು ಮಾಡಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :-

ಅ) 1995-96 ನೇ ಸಾಲಿನಲ್ಲಿ 187.60 ಲಕ್ಷ ರೂ. ಬಿಡುಗಡೆ ಮಾಡಿದೆ. 1996-97 ನೇ ಸಾಲಿಗೆ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಆ) ದಿನಾಂಕ 15-7-96 ರವರೆಗೆ 104.05 ಲಕ್ಷ ರೂ. ಖರ್ಚಾಗಿರುತ್ತದೆ. ಕುಡಿಯುವ ನೀರಿನ ಕೊರತೆ ಅವಲಂಬಿಸಿ ವೆಚ್ಚ ಭರಿಸಲಾಗುವುದು.

ವಿಷಯ :- ಮಾಗಡಿ ತಾಲ್ಲೂಕು ಕಛೇರಿಯಲ್ಲಿ ಸಿಬ್ಬಂದಿ ಕೊರತೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 850 (1326)

ಶ್ರೀಹೆಚ್. ಸಿ. ಬಾಲಕೃಷ್ಣ (ಮಾಗಡಿ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಮಾಗಡಿ ತಾಲ್ಲೂಕು ಕಛೇರಿಯಲ್ಲಿ ಸಿಬ್ಬಂದಿ ಕೊರತೆಯಿಂದ ಸಾರ್ವಜನಿಕರ ಕೆಲಸಗಳಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ತೊಂದರೆ ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

(ಆ) ಮಾಗಡಿ ಉಪ-ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಯಾದ ಕ್ರಯಪತ್ರಗಳು ಸಾರ್ವಜನಿಕರಿಗೆ ಅತ್ಯಂತ ವಿಳಂಬವಾಗಿ ತಲುಪುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ; ಈ ವಿಳಂಬಕ್ಕೆ ಕಾರಣಗಳೇನು?

(ಇ) ಈ ವಿಳಂಬವನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :-

(ಅ) ಬಂದಿದೆ. ಸಿಬ್ಬಂದಿ ಕೊರತೆಯನ್ನು ನಿವಾರಿಸಲು ಖಾಲಿ ಇರುವ ಹುದ್ದೆಗಳನ್ನು ಶೀಘ್ರದಲ್ಲಿಯೇ ತುಂಬಲಾಗುವುದು.

(ಆ) ಬಂದಿದೆ. ಕೈಬರಹದಿಂದ ದಸ್ತಾವೇಜುಗಳನ್ನು ನಕಲು ಮಾಡುವ ಪದ್ಧತಿ ಇರುವುದರಿಂದ ಇದಕ್ಕೆ ಸಾಕಷ್ಟು ಸಮಯಾವಕಾಶ ತೆಗೆದುಕೊಳ್ಳುತ್ತದೆ. ಆದ್ದರಿಂದ, ನೋಂದಣಿಯಾದ ದಸ್ತಾವೇಜುಗಳನ್ನು ಹಿಂತಿರಿಗಿಸಲು ವಿಳಂಬವಾಗುತ್ತಿದೆ.

ಇ) ನೋಂದಣಿಯಾದ ದಸ್ತಾವೇಜುಗಳನ್ನು ನೀಡಲು ಆಗುತ್ತಿರುವ ವಿಳಂಬವನ್ನು ತಪ್ಪಿಸಲು "ಫೈಲಿಂಗ್" ಪದ್ಧತಿಯನ್ನು ಸರ್ಕಾರವು ಜಾರಿಗೆ ತರುತ್ತಿದೆ. ಅಂದರೆ, ನೋಂದಣಿಗೆ ಬರುವ ಸಾರ್ವಜನಿಕರು ಮೂಲ ಪತ್ರವನ್ನು ನೋಂದಣಿಗೆ ಹಾಜರು ಪಡಿಸುವಾಗಲೇ ದಸ್ತಾವೇಜಿನ ಬೆರಳಚ್ಚು ಮಾಡಿದ ಮತ್ತೊಂದು ಯಥಾ ಪ್ರತಿಯನ್ನು ನೀಡಬೇಕು. ನೋಂದಣಿಯಾದ ನಂತರ ಯಥಾ ಪ್ರತಿಯಲ್ಲಿ ಆಗತ್ಯವಾದ ವಿವರಗಳನ್ನು ದಾಖಲಿಸಿ ಮೂಲ ಪತ್ರಗಳನ್ನು ಸಂಬಂಧಪಟ್ಟ ಪಾರ್ಟಿಗೆ ಹಿಂತಿರಿಗಿಸಲಾಗುವುದು. ಕೈ ಬರವಣಿಗೆ ಪದ್ಧತಿಯಿಂದ ಈ ಪದ್ಧತಿಗೆ ಬದಲಾಯಿಸಿದರೆ ನೋಂದಣಿ ಕಾರ್ಯದಲ್ಲಿ ಆಗುತ್ತಿರುವ ವಿಳಂಬವನ್ನು ಕಡಿಮೆಗೊಳಿಸಬಹುದಾಗಿರುತ್ತದೆ.

ವಿಷಯ :- ಸಂಕೇಶ್ವರ-ಹಿರೇಕೆರೂರು ಅನುಸೂಚಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 852 (1533)

ಶ್ರೀ ಯು. ಜಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ವಿಭಾಗದ ಸಂಕೇಶ್ವರ ಘಟಕದಿಂದ ಸಂಕೇಶ್ವರ-ಹಿರೇಕೆರೂರು ಅನುಸೂಚಿ ಪ್ರಾರಂಭವಾದದ್ದು ಯಾವಾಗ ; ವಿಭಾಗೀಯ ಅಧಿಕಾರಿಗಳಿಂದ ಯಾವಾಗ ಆದೇಶ ಆಗಿದೆ ;

ಆ) ಪ್ರಾರಂಭವಾದ ನಂತರ 30-06-1996 ರ ವರೆಗೆ ಪ್ರತಿ ತಿಂಗಳು ಎಷ್ಟು ದಿನ ರದ್ದಾಗಿದೆ. ಎಷ್ಟು ದಿನ ಹಿರೇಕೆರೂರು ತಲುಪದೆ ಮಧ್ಯದಲ್ಲಿಯೇ ವಾಪಸಾಗಿದೆ ; ಎಷ್ಟು ದಿನ ಒಂದು ತಾಸಿಗಿಂತ ತಡವಾಗಿ ಹೋಗಿದೆ ;

ಇ) ಕೂಡಲೇ ತಪ್ಪದೇ ಓಡಿಸುವಂತೆ ಘಟಕದ ವ್ಯವಸ್ಥಾಪಕರಿಗೆ ಆದೇಶಿಸಲಾಗುವುದೇ?